# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 01/2020**

**ಪ್ರಾ.ಸಾ. :07**

ಸಾಕ್ಷಿಯ ಹೆಸರು : ರಾಜು ಜೋಗಿ ಆಗೇರ
ತಂದೆಯ ಹೆಸರು : ಜೋಗಿ ಆಗೇರ
ವಯಸ್ಸು : 51 ವರ್ಷ
ಕೆಲಸ : ಪಿ.ಎಸ್.ಐ,. ಕರಾವಳಿ ಕಾವಲು ಪಡೆ,
ಪೊಲೀಸ್ ಠಾಣೆ,ಬೇಲೆಕೇರೆ, ಅಂಕೋಲಾ
ವಾಸ : ಅಂಕೋಲಾ

**ದಿನಾಂಕಃ 28-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2014 ರಿಂದ 2019 ರ ವರೆಗೆ ನಾನು ಗೋಕರ್ಣ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಕರ್ತವ್ಯ ನಿರ್ವಹಿಸಿರುತ್ತೇನೆ. ನ್ಯಾಯಾಲಯದಿಂದ ಆರೋಪಿಯ ವಿರುದ್ದ ಪ್ರೋಕ್ಲೇಮೆಷನ್ ಜಾರಿಗಾಗಿ ಬಂದಿದ್ದು, ಅದರಂತೆ ನಾನು ದಿಃ 16-02-2022 ರಂದು ಚಿಕ್ಕಮಗಳೂರಿನ ಮೂಡಿಗೆರೆಗೆ ಹೋಗಿ, ಅಲ್ಲಿ ಬಾಪೂ ನಗರದಲ್ಲಿರುವ ಆರೋಪಿಯ ವಿಳಾಸಕ್ಕೆ ಹೋಗಿ, ವಿಚಾರಿಸಲಾಗಿ, ಆರೋಪಿಯು ಪತ್ತೆಯಾಗಿರುವುದಿಲ್ಲ, ಆ ನಂತರ ನಾನು ಎರಡು ಜನ ಪಂಚರನ್ನು ಬರಮಾಡಿಕೊಂಡು ಮೂಡಿಗೆರೆಯ ಕೆ.ಎಸ್.ಆರ್.ಟಿ.ಸಿ.ಯ ಬಸ್ ನಿಲ್ದಾಣದಲ್ಲಿ ಆರೋಪಿಯ ಪತ್ತೆಗಾಗಿ ಡಂಗುರ ಸಾರಿ, ನಂತರ ಪ್ರೋಕ್ಲೇಮೆಷನ್ ಪ್ರತಿಯನ್ನು ಕೆ.ಎಸ್.ಆರ್.ಟಿ.ಸಿ.ಯ ಬಸ್ ನಿಲ್ದಾಣದಲ್ಲಿ ಅಂಟಿಸಿರುತ್ತೇನೆ, ಆ ನಂತರ ಇನ್ನೊಂದು ಪ್ರತಿಯನ್ನು ಮೂಡಿಗೆರೆಗೆಯ ಸಂತೆಯಲ್ಲಿರುವ ವಾಟರ್ ಟ್ಯಾಂಕ್ ಮೇಲೆ ಅಂಟಿಸಿರುತ್ತೇನೆ, ನಂತರ ಮೂಡಿಗೆರೆಗೆಯ ಬಾಪೂ ನಗರದಲ್ಲಿರುವ ಆರೋಪಿಯ ಮನೆಗೆ ತೆರಳಿ ಪ್ರೋಕ್ಲೇಮೆಷನ್ ಪ್ರತಿಯನ್ನು ಆರೋಪಿಯ ಮನೆಯ ಬಾಗಿಲಿಗೆ ಅಂಟಿಸಿರುತ್ತೇನೆ ಹಾಗೂ ಈ ಬಗ್ಗೆ ಬೆಳಿಗ್ಗೆ 11-00 ರಿಂದ 12-00 ಗಂಟೆಯ ವರೆಗೆ ಪಂಚನಾಮೆ ಮಾಡಿ, ಪಂಚರ

ಸಹಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಗೋಕರ್ಣಕ್ಕೆ ಬಂದು, ಪಂಚನಾಮೆಯನ್ನು ವರದಿಯೊಂದಿಗೆ ಠಾಣಾಧಿಕಾರಿಗೆ ನೀಡಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–9 ಎಂದು, ಸಾಕ್ಷಿಯ ಸಹಿಯನ್ನು ನಿಪಿ–9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಿಂದ ಆರೋಪಿಯ ವಿರುದ್ದ ಹೊರಡಿಸಿದ ಪ್ರೊಕ್ಲೇಮೆಷನ್ ವಾರೆಂಟ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–10 ಎಂದು, ವರದಿಯನ್ನು ನಿಪಿ–11 ಎಂದು, ನಿಪಿ–11 ವರದಿಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–11(ಎ) ಎಂದು ಗುರುತಿಸಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ